# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.3816/2019

| | | |
|---|---|---|
| ಫಿರ್ಯಾದಿದಾರರು | : | ರಾಜ್ಯ ಸರ್ಕಾರದ ಪರವಾಗಿ ಕಾಮಾಕ್ಷಿಪಾಳ್ಯ ಆರಕ್ಷಕ ಠಾಣೆ |
| | | **- ವಿರುದ್ಧ -** |
| ಆರೋಪಿ - 1 | : | ಶ್ರೀ ಪ್ರೇಮ್ ಕುಮಾರ್<br>ಬಿನ್. ನಿಂಗಪ್ಪ , 30 ವರ್ಷ<br>ವಾಸಃ ನಂ.32, 3ನೇ ಅಡ್ಡರಸ್ತೆ,<br>ಬೈರವೇಶ್ವರನಗರ, ಸುಂಕದಕಟ್ಟೆ,<br>ಬೆಂಗಳೂರು - 560 091. |
| | | **2. ಹೇಮಂತ್ ಕುಮಾರ್ (ಪ್ರತ್ಯೇಕಿಸಲಾಗಿದೆ)** |

## ದೋಷಾರೋಪಣೆ

ಶ್ರೀ. **ಸೋಮನಾಥ, ಬಿ.ಎ.(ಲಾ), ಎಲ್.ಎಲ್.ಬಿ.,** 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಿದ್ದೇನೆ.

ಕಾಮಕ್ಷಿಪಾಳ್ಯ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಸುಂಕದಕಟ್ಟೆ, ಬೈರವೇಶ್ವರನಗರ, 3ನೇ ಅಡ್ಡರಸ್ತೆಯ ನಂ.32 ರ ಮನೆಯಲ್ಲಿ 1ನೇ ಆರೋಪಿಯಾದ ನೀವು ಸಾಕ್ಷಿ-1 ರವರು ಪ್ಯಾಂಟುಗಳನ್ನು ಹೊಲೆದು ಕೊಡುವಂತೆ ಗುಣಮಟ್ಟದ ಬಟ್ಟೆ, ಬಟನ್, ಜೀಬುಟಿ ಲೋಗೋ ಟ್ಯಾಗ್ ಹಾಗೂ ಮೇಟಿರಿಯಲ್ಸ್ ಗಳನ್ನು ನೀಡುತ್ತಿದ್ದು, ಅದರಂತೆ 1ನೇ ಆರೋಪಿಯಾದ ನೀವು ಸಾಕ್ಷಿ-1 ರವರು ಹೇಳಿದ ರೀತಿಯ ಪ್ಯಾಂಟ್ ಗಳನ್ನು ಸಿದ್ದಪಡಿಸಿಕೊಡುತ್ತಿದ್ದು, 1ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಂದ ಬಟ್ಟೆ ಮತ್ತು ಮೇಟಿರಿಯಲ್ಸ್ ಪಡೆದು ಕೊಂಡು ಕೆಲ ಪ್ಯಾಂಟ್ ಗಳನ್ನು ಸಿದ್ದಪಡಿಸಿಕೊಟ್ಟು, ಇನ್ನೂ ಕೆಲ ಪ್ಯಾಂಟ್ ಗಳನ್ನು ನಿಮ್ಮ ಸ್ವಾಧೀನದಲ್ಲಿಟ್ಟು ಕೊಂಡು ಅಕ್ರಮ ಹಣ ಸಂಪಾದನೆಗಾಗಿ, ಸಾಕ್ಷಿ-1

ರವರಿಗೆ ಮೋಸ ಮಾಡುವ ಉದ್ದೇಶದಿಂದ 2ನೇ ಆರೋಪಿಯವರಿಗೆ ನೀಡಿದ್ದು, 2ನೇ ಆರೋಪಿ ಯಾವುದೇ ಬಿಲ್ಲು ವಗೈರೆ ಇಲ್ಲದೇ ಪ್ಯಾಂಟ್ ಗಳನ್ನು 1ನೇ ಆರೋಪಿಯಾದ ನಿಮ್ಮ ಮನೆಯಲ್ಲಿ ಅಕ್ರಮವಾಗಿ ಸ್ವಾಧೀನದಲಿಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡಲು ಪ್ರಯತ್ನಿಸಿ ಸಾಕ್ಷಿ-1 ರವರಿಗೆ ಅಕ್ರಮ ನಷ್ಟವನ್ನುಂಟು ಮಾಡಿ ಅಪ್ರಮಾಣಿಕವಾಗಿ ಅಪರಾಧಿಕ ನಂಬಿಕೆ ದ್ರೋಹವೆಸಗಿರುತ್ತೀರಿ. ಈ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.406 ರಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞಾನಕ್ಕೆ ಒಳಪಡುತ್ತದೆ.

ಈ ಮೇಲ್ಕಂಡ ಆಪಾದನೆಗಳ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕಃ 26.03.2026 **(ಸೋಮನಾಥ)**
ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

## 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.3816/2019

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಕಾಮಾಕ್ಷಿಪಾಳ್ಯ
ಆರಕ್ಷಕ ಠಾಣೆ

**- ವಿರುದ್ಧ -**

ಆರೋಪಿ - 1 : ಶ್ರೀ ಪ್ರೇಮ್ ಕುಮಾರ್
ಬಿನ್. ನಿಂಗಪ್ಪ, 30 ವರ್ಷ

## ಆರೋಪಣೆ

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 26.03.2026

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.